ಪೋಲೀಸ್ ಇಲಾಖೆ.

ತಾರೀಖು 16ನೇ ಫಿಬ್ರವರಿ 1885.

ನಂ. 978—160.—ಬೆಂಗಳೂರು ಷಹರ ಹೋಲೀಸ್ ಮೂಜಿ ಕಾನ್ಸ್ಟೇಬುಲ್ ಕ್ರಿಷ್ಣರಾಯನು ಮೈಸೂರು ಸ್ಟೇಟ್ ರೈಲ್ವೇ ಪೈಕಿ ಬೆಂಗಳೂರು ಷಹರ ಟರ್ಮಿನಸ್ ರೈಲ್ವೆ ಸ್ಟೇಷನಿಂದ ಕ್ರಿಷ್ಣಾಬಾಯಿ ಯಂಬ ಒಬ್ಬ ರಜಪುತ್ರ ಹುಡಗಿಯನ್ನು ಚೋರಿಯಿಂದ ಸಾಗಿಸಿರು ವಂತೆ ರಿಪೋರ್ಟಾಗಿರುತ್ತೆಯಾಗಿ ಸದರೀ ಹುಡಗಿಯು ಪತ್ತೆಯಾಗುವಂತೆ ವರ್ತಮಾನ ಕೊಡುವ ಬಗ್ಯೆ 200 ರೂಪಾಯಿಗಳ ಇನಾಂ ಕೊಡಲ್ಪಡುತ್ತೆ.

ಕ್ರಿಷ್ಣರಾಯನಿಂದ ಸಾಗಿಸಲ್ಪಡುವಾಗ ಸದರಿ ಹುಡಗಿಯ ಮೈ ಮೇಲೆ ಇದರಡಿ ಕಂಡ ಪದಾರ್ಥಗಳು ಇದ್ದಂತೆ ತಿಳಿಯಬರುತ್ತೆ:—

ಬಂದು ಕರೇಶೇರೆ, ಕೆಂಪು ಚೀಟ್ ರವಿಕೆ, ಕೆಂಪು ಮತ್ತು ವಜ್ರದ ಜುಮಿಕಿಗಳ ಸಹಿತ ಬಂದು ಜೊತೆ ಕಿಂಡವಾಲೆಗಳು, ಭಂಗಾರದ ಜೋಮಾಲೆಸರ ಬಂದು, ಅಡ್ಡಿಕೆ ಬಂದು, ಚವರಿಕುಪ್ಪೆ ಬಂದು, ಬೆಳ್ಳಿಡಾಬು ಬಂದು, ವಜ್ರದ ಬುಲ್ಲಾಕು ಬಂದು, ಬೆಳ್ಳಿಕಡಗಗಳು, ಬೆಳ್ಳಿ ಹೆಬ್ಬಟ್ಟು ಪಿಲ್ಲೆಗಳು

ಸದರಿ ಕ್ರಿಷ್ಣಾಬಾಯಿಯು ಚಹರೆ ಇದರಡಿ ಕಂಡಂತೆ ಇರುತ್ತೆ:—

ವಯಸ್ಸು—15ರಿಂದ 18 ವರುಷದ ವಳಗೆ, ಬಂಣ—ಕಪ್ಪು, ಎತ್ತರ—ಗಿಡ್ಡತರಹ, ಮೂಗು ವೊದ್ದನಾಗಿದೆ, ಗುರ್ತುಗಳು—ಯಡಗ ಣ್ಣಿನಲ್ಲಿ ಹುಣ್ಣು ಬಿದ್ದಿದೆ, ಮತ್ತು ಹಣೆ ಮೇಲೆ ಬಂದು ಕಲೆ ಯಿದೆ,

---

ನಂ. 979—161.—ಸ್ಯ 1885ನೇ ಇಸವಿ ಜನವರೀ 24ನೇ ಮಾರ್ಚು ಯಿನ ಮೈಸೂರು ಗೆಜೆಟ್ 1ನೇ ಭಾಗದ 21ನೇ ಪುಟದಲ್ಲಿ ಘಾಯಿಷ್ಮಾಡಲ್ಪಟ್ಟ 1885ನೇ ಇಸವಿ ಜನವರೀ 21ನೇ ಮಾರ್ಚು ಯಿನ ಇಸ್ತಿಹಾರ್‌ನಾಮೆಯನ್ನು ಬದಲಾಯಿಸಿ, ಅಸಿಸ್ಟೆಂಟ್ ಕಮ್ಮಿಷನರ್ ಮೆ|| ಕ್ರಿಷ್ಣರಾವ್ ಯಂ. ಏ. ಯವರಿಗೆ ಬದಲಾಗಿ ಮೆ|| ಕೆ. ಮಹಮ್ಮದ್ ಅಲಿಯವರು ಪೋಲೀಸ್ ಅಸಿಸ್ಟೆಂಟ್ ಕಮ್ಮಿಷನರಾಗಿ ನೊಕರರು ಮಾಡಲ್ಪಟ್ಟಿರುತ್ತಾರೆ.

ಎಸ್. ವೆಂಕಟವರದಯ್ಯಂಗಾರ್,
ಅ|| ಸೆಕ್ರೆಟೇರಿ.

ಪಬ್ಲಿಕ್ ವರ್ಕ್ಸ್ ಇಲಾಖೆ.

ತಾರೀಖು 14ನೇ ಫಿಬ್ರವರಿ 1885.

ಮೆ|| ಏ. ಆರ್. ನಟೇರ್ಕಾಸ್ತ್ರಿ ಬಿ. ಏ, ಬಿ. ಸಿ, ಇ. ಯವರು ಅಜಮೂಯಿಷಿ ತರೀಕೆ ಅಸ್ಸೆಂಟಿಸ್ ಇಂಜಿನಿಯರಾಗಿ ನೊಕರೆ ರ್ಮಾಡಲ್ಪಟ್ಟು, ಬೆಂಗಳೂರು ಡಿವೀಜನ್ನಿಗೆ ತಾತ್ಕಾಲಕ್ಕೆ ನೇಮಿಸಲ್ಪಟ್ಟಿರುತ್ತಾರೆ.

2. ಅವರು ಮಾಹೆ ಮಜಕೂರು 13ನೇ ವಾರ್ಚು ಮಧ್ಯಾನ್ಹಾತ್ಪೂರ್ವ ಹಾಜರೀ ರಿಪೋರ್ಟು ಮಾಡಿರುತ್ತಾರೆ.

ಹುಕ್ಕುಂ ಬಮೋಜೇಬ್,
ಸಿ. ಹೆಚ್. ಯಂ. ಕೆ. ಸಿಂಗೆಟರ್, ಕೆಪ್ಟನ್, ಆರ್., ಇ.,
ಸೆಕ್ರೆಟೇರಿ, ಮೈಸೂರು ಗವರ್ನಮೆಂಟ್.